ಮಾಡೋಣ. ಈಗ ಅರ್ಜಿಯನ್ನು ಒಪ್ಪಿಸುವುದು ಇದೆ. 1–2 ಅಜೆಂಡಾ ಇವೆ. ಒಂದೊಂದು ನಿಮಿಷದಲ್ಲಿ ಮುಗಿಸಿಬಿಡುತ್ತೇನೆ. ಈಗ ಮುಗಿಸಿ ಬಿಡೋಣ. ಮಾನ್ಯ ಅಭಯ ಪಾಟೀಲ್‌ರವರು ಈಗ ಅರ್ಜಿಯನ್ನು ಒಪ್ಪಿಸುತ್ತಾರೆ.

3. ಅರ್ಜಿಯನ್ನೊಪ್ಪಿಸುವುದು :

ಶ್ರೀ ಅಭಯ ಪಾಟೀಲ್ (ಬೆಳಗಾವಿ ದಕ್ಷಿಣ) : ಮಾನ್ಯ ಅಧ್ಯಕ್ಷರೆ, ಬೆಳಗಾವಿ ತಾಲ್ಲೂಕಿನ ಕಂಗ್ರಾಳಿ ಬಿಕೆ ಗ್ರಾಮದ ಸರ್ವೆ ನಂ.36/1 ರಲ್ಲಿನ 8 ಎಕರೆ 31 ಗುಂಟೆ ಕ್ಷೇತ್ರವನ್ನು ಕೆ.ಐ.ಎ.ಡಿ.ಬಿ.ಯಿಂದ ಮರಳಿ ಪಡೆದು ಭೂ ಮಾಲೀಕರಿಗೆ ಹಸ್ತಾಂತರಿಸುವ ಬಗ್ಗೆ ಅರ್ಜಿಯನ್ನು ಸಭೆಗೆ ಒಪ್ಪಿಸುತ್ತಿದ್ದೇನೆ.

ಅಧ್ಯಕ್ಷರು : ಅರ್ಜಿಯನ್ನು ಒಪ್ಪಿಸಲಾಯಿತು.

4. ವಿತ್ತೀಯ ಕಾರ್ಯಕಲಾಪಗಳು :

ಪೂರಕ ಅಂದಾಜುಗಳು, 2009–10 (ಒಂದನೇ ಕಂತು)

ಶ್ರೀ ಬಿ.ಎಸ್.ಯಡಿಯೂರಪ್ಪ (ಮುಖ್ಯಮಂತ್ರಿಯವರು) : ಮಾನ್ಯ ಅಧ್ಯಕ್ಷರೆ, 2009–10ನೇ ಸಾಲಿನ ಅಂದಾಜುಗಳನ್ನು (ಒಂದನೇ ಕಂತು) ಮಂಡಿಸುತ್ತೇನೆ.

ಅಧ್ಯಕ್ಷರು : ಮಂಡಿಸಲಾಯಿತು.

(ಗೊಂದಲ)

ಶ್ರೀ ಸಿದ್ದರಾಮಯ್ಯ : ನಿಮ್ಮ ಹತ್ತಿರವಿರುವ ವರದಿ ಕೊಡಿ. Un-official ಆಗಿ ತೆಗೆದುಕೊಂಡಿರುವ ರಿಪೋರ್ಟ್ ಕೊಡಿ. ಅದನ್ನು ಕೊಡಿ.

ಅಧ್ಯಕ್ಷರು : Verify ಮಾಡಿ ಹೇಳುತ್ತೇವೆ ಎಂದು ಹೇಳಿದ್ದಾರಲ್ಲಾ?

ಶ್ರೀ ಸಿದ್ದರಾಮಯ್ಯ : ಅದಕ್ಕೆ ನಾವು ಇದನ್ನು ಬೇಜವಾಬ್ದಾರಿ ಸರ್ಕಾರ ಎಂದು ಕರೆಯುವುದು.

ಅಧ್ಯಕ್ಷರು : ಈಗ ಮಾನ್ಯ ರೇವಣ್ಣನವರು ಮಾತನಾಡುತ್ತಾರೆ.

(ಗೊಂದಲ)

ಅಧ್ಯಕ್ಷರು : ಈಗ Rule 69 ವಿಷಯ ಹೇಳಿ.

5. ನಿಯಮ 69ರ ಮೇರೆಗೆ ಚರ್ಚೆ :

ವಿಷಯ: ಮೋಟಾರು ವಾಹನಗಳಿಗೆ ಗರಿಷ್ಠ ಭದ್ರತಾ ಫಲಕಗಳನ್ನು ಹಾಕಿಸುವಲ್ಲಿ ಟೆಂಡರ್‌ನಲ್ಲಿ ಆಗಿರುವ ತಾರತಮ್ಯದ ಬಗ್ಗೆ.

ಶ್ರೀ ಹೆಚ್.ಡಿ.ರೇವಣ್ಣ (ಹೊಳೆನರಸೀಪುರ) : ಮಾನ್ಯ ಅಧ್ಯಕ್ಷರೆ, ರೂಲ್ 60ರಲ್ಲಿ ನಿನ್ನೆಯೂ ನಾನು ನೋಟೀಸ್ ಕೊಟ್ಟಿದ್ದೆ ಹಾಗೂ ಇವತ್ತು ಸಹ ನಾನು ಕೊಟ್ಟಿದ್ದೇನೆ. ಮೋಟಾರ್ ವಾಹನಗಳ ಕಳವು ಮತ್ತು ಅವುಗಳ ದುರುಪಯೋಗವನ್ನು ತಡೆಗಟ್ಟುವ ಸಲುವಾಗಿ ಮತ್ತು ವಾಹನಗಳನ್ನು ಬಳಸಿ ನಡೆಸುವ ಉಗ್ರಗಾಮಿಗಳ ನಕ್ಸಲ್ ಚಟುವಟಿಕೆಗಳು ಮತ್ತು ಇನ್ನಿತರ ಅಪರಾಧಗಳನ್ನು ತಡೆಗಟ್ಟುವ ಸಲುವಾಗಿ ಮತ್ತು ದೇಶದ ಸುಭದ್ರತೆಯನ್ನು ಕಾಪಾಡುವ ಸಲುವಾಗಿ ದೇಶದಲ್ಲಿ ನೋಂದಣಿಯಾಗಿರುವ ಮತ್ತು ಮುಂದೆ ನೋಂದಣಿಯಾಗುವ ಎಲ್ಲಾ ಮೋಟಾರ್ ವಾಹನಗಳಿಗೆ ಚಾಲ್ತಿಯಲ್ಲಿರುವ ನೋಂದಣಿ ಫಲಕಗಳ ಬದಲಿಗೆ ಗರಿಷ್ಠ ಭದ್ರತಾ ಫಲಕಗಳನ್ನು ಒಳಪಡಿಸಲು ಅನುಕೂಲವಾಗುವ ಭಾರತ ಸರ್ಕಾರ ವಾಹನ 1989 ರ ನಿಯಮ 50ಕ್ಕೆ ತಿದ್ದುಪಡಿ ಮಾಡಿ ಮೋಟಾರ್ ವಾಹನ ಆದೇಶ ಹೊಸ ಗರಿಷ್ಠ ನೋಂದಣಿ ಫಲಕ 2001 ಅನ್ನು ಹೊರಡಿಸಿರುತ್ತದೆ. ಈ ನಿಯಮದನ್ವಯ ಕರ್ನಾಟಕ ರಾಜ್ಯದಲ್ಲಿ ಗರಿಷ್ಠ ಭದ್ರತಾ ನೋಂದಣಿ ಫಲಕಗಳನ್ನು ಹಾಲಿ ಹಾಗೂ ನೋಂದಣಿಯಾಗಿರುವ ಮತ್ತು ಮುಂದೆ ನೋಂದಣಿಯಾಗಬೇಕಾಗಿರುವ ಎಲ್ಲಾ ಮೋಟಾರ್ ವಾಹನಗಳನ್ನು 15 ವರ್ಷಗಳ Build Own Operate and Transport (B.O.O.T.) ಆಧಾರದ ಮೇಲೆ ಬಿಡ್‌ಅನ್ನು ಘನತೆವೆತ್ತ ರಾಜ್ಯಪಾಲರ ಪರವಾಗಿ, ಸಾರಿಗೆ ಇಲಾಖೆಯ ಕಾರ್ಯದರ್ಶಿಯವರ ಮುಖಾಂತರ ಬಿಡ್ ಪ್ರಕ್ರಿಯೆಯನ್ನು ಆಹ್ವಾನಿಸಲಾಗಿತ್ತು. ಈ ಪ್ರಕ್ರಿಯೆಯಲ್ಲಿ ಸುಮಾರು 7 ಕಂಪನಿಗಳು ಭಾಗವಹಿಸಿದ್ದು ಅವುಗಳಲ್ಲಿ ಮೆ: ಶಿಮ್‌ನಿತ್‌ಉಚ್ ಕಂಪನಿ ಹೆಸರಿನ ಬಿಡ್ ಅನ್ನು ಸರ್ಕಾರ ಒಪ್ಪಂದ ಮಾಡಿಕೊಂಡಿರುತ್ತದೆ. ಈ ಕಂಪನಿ ಬೇರೆ ರಾಜ್ಯಗಳಲ್ಲಿ ಸಲ್ಲಿಸಿದ ಬಿಡ್‌ಅನ್ನು ತಿರಸ್ಕರಿಸಿ ಅದರ ಬಗ್ಗೆ ವಿಚಾರಣೆಯನ್ನು ಸಹ ನಡೆಸಲಾಗಿರುತ್ತದೆ. ಆದರೆ, ಈ ಬಿಡ್ ಪ್ರಕ್ರಿಯೆ Karnataka Transmission in public preventive Rules -2000 ನಿಯಮಗಳಿಗೆ ವಿರುದ್ಧವಾಗಿದ್ದು, ಇದರಿಂದ ಸಾರ್ವಜನಿಕರ ಕೋಟ್ಯಾಂತರ

ರೂಪಾಯಿಗಳ ಹಣ ನಷ್ಟವಾಗಿರುವುದರಿಂದ ಸದರಿ ವಿಷಯವನ್ನು ನಿಯಮ 60ರಲ್ಲಿ ಪ್ರಸ್ತಾಪಿಸಲು ಅನುಮತಿ ನೀಡಬೇಕೆಂದು ಕೋರುತ್ತೇನೆ.

ಅಧ್ಯಕ್ಷರು : ಮಾನ್ಯ ರೇವಣ್ಣನವರೆ, ಇವತ್ತು ನಿಯಮ 69ರ ಮೇರೆಗೆ ಚರ್ಚೆ ಮಾಡುವ ವಿಷಯವೊಂದು ನಿಮ್ಮದು ಇದೆ.

ಶ್ರೀ ಹೆಚ್. ಡಿ. ರೇವಣ್ಣ : ನಿಯಮ 60ರ ಅಡಿಯಲ್ಲಿಯೇ ನಾನು ಪ್ರಸ್ತಾಪ ಮಾಡುತ್ತೇನೆ.

ಅಧ್ಯಕ್ಷರು : ನಿನ್ನೆಯದು ಇವತ್ತು ಪ್ರಸ್ತಾಪ ಮಾಡುತ್ತಿದ್ದೀರಾ?

ಶ್ರೀ ಹೆಚ್.ಡಿ.ರೇವಣ್ಣ : ಇದು ಸಾರ್ವಜನಿಕ ಮಹತ್ವವುಳ್ಳ ವಿಷಯವಿರುವುದರಿಂದ ನಾನು ಪ್ರಸ್ತಾಪ ಮಾಡುತ್ತಿದ್ದೇನೆ.

ಅಧ್ಯಕ್ಷರು : ಮಾನ್ಯ ರೇವಣ್ಣನವರೆ, ಈಗ ಹೇಗೆ ಮಾಡುವುದು? ಸನ್ಮಾನ್ಯ ಮುಖ್ಯಮಂತ್ರಿಗಳು ಒಪ್ಪಿಕೊಂಡಿದ್ದಾರೆ, ಸರ್ಕಾರವು ಒಪ್ಪಿಕೊಂಡಿದೆ. ಈಗ ಇದನ್ನು ನಿಯಮ ೧9ರಲ್ಲಿ covert ಮಾಡುತ್ತೇನೆ.

ಶ್ರೀ ಹೆಚ್. ಡಿ. ರೇವಣ್ಣ : ಮಾನ್ಯ ಅಧ್ಯಕ್ಷರೆ, ನಿಯಮ 69ರ ಅಡಿಯಲ್ಲಿ ಚರ್ಚೆ ಮಾಡುವುದಕ್ಕೆ ಅವಕಾಶ ಕೊಡಿ.

ಅಧ್ಯಕ್ಷರು : ಮಾನ್ಯ ರೇವಣ್ಣನವರೆ, ಚರ್ಚೆ ಮಾಡಬೇಕಲ್ಲವೇ? ಇದರಲ್ಲಿ ಏಕೆ ನೀವು ವಾದ ಮಾಡುತ್ತಿದ್ದೀರಿ?

ಶ್ರೀ ಹೆಚ್. ಡಿ. ರೇವಣ್ಣ : ಆಯಿತು, ನಿಯಮ 69ರ ಅಡಿಯಲ್ಲಿಯೇ ಚರ್ಚೆ ಮಾಡಲು ಅವಕಾಶ ಕೊಡಿ.

ಶ್ರೀ ಸಿ. ಟಿ. ರವಿ : ಯಾರ್ಯಾರ ಹಣೆಬರಹ ಏನೇನು ಎನ್ನುವುದನ್ನು ಬಿಚ್ಚಿಡುವುದಕ್ಕೆ ಅವಕಾಶವಾಗುತ್ತದೆ. ಅವಕಾಶ ಕೊಡಿ.

ಶ್ರೀ ಹೆಚ್. ಸಿ. ಬಾಲಕೃಷ್ಣ : ಯಾರು ಕೋತಿ, ಯಾರು ಮೇಕೆ ಎನ್ನುವುದು ಆಚೆ ಬರಲಿ. ಎಲ್ಲರಿಗೂ ಗೊತ್ತಾಗಲಿ.

(ಗೊಂದಲ)

ಶ್ರೀ ಎಸ್. ಸುರೇಶ್‌ಕುಮಾರ್ (ನಗರಾಭಿವೃದ್ಧಿ, ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು) : ಸನ್ಮಾನ್ಯ ಅಧ್ಯಕ್ಷರೆ, ಸನ್ಮಾನ್ಯ ಮುಖ್ಯಮಂತ್ರಿಗಳು ಈ ಒಂದು ವಿಷಯದ ಬಗ್ಗೆ ಚರ್ಚೆ ಮಾಡಲು ನಾವು ಸಿದ್ಧರಿದ್ದೇವೆಂದು ಹೇಳಿದ್ದಾರೆ. ಈಗಾಗಲೇ ಸನ್ಮಾನ್ಯ ರೇವಣ್ಣನವರು ಮಂಡಿಸಿರುವ ಇನ್ನೊಂದು ಪ್ರಸ್ತಾವನೆ ಸಭೆಯ ಮುಂದೆ ಇದೆ. ಹೊಸಕೋಟೆಗೆ ಸಂಬಂಧಿಸಿದಂಥ ವಿಷಯವಿದೆ. ಮಾನ್ಯ ಸಭಾಧ್ಯಕ್ಷರಲ್ಲಿ ನನ್ನದೊಂದು ಮನವಿಯೇನೆಂದು, ಕೊನೆಪಕ್ಷ ಇವತ್ತಾದರೂ, ನಾವು

ಬೇಡಿಕೆಗಳ ಬಗ್ಗೆ ಚರ್ಚೆ ಪ್ರಾರಂಭ ಮಾಡದೇ ಇದ್ದರೆ, the very purpose will be lost. ಅದಕ್ಕೋಸ್ಕರ, ನೀವು ಯಾವುದಾದರೊಂದು ಸಮಯವನ್ನು ನಿಗದಿ ಮಾಡಿ, ಅದಕ್ಕಿಂತ ಬಹಳ ಮುಖ್ಯವಾಗಿ ನಾನು ತಮ್ಮಲ್ಲಿ ಕೇಳಿಕೊಳ್ಳುವುದೇನೆಂದರೆ, ಒಂದು ಅವಧಿಯನ್ನು ನಿಗದಿ ಮಾಡಿ. We can not go on like that. ಎರಡು ಗಂಟೆ ಮೂರು ಗಂಟೆ ಹೋಗುವುದಕ್ಕಾಗುವುದಿಲ್ಲ. ಅದಕ್ಕಾಗಿ ಒಂದು ಸಮಯವನ್ನು ನಿಗದಿ ಮಾಡಿ, ಚರ್ಚೆಗೆ ಅವಕಾಶ ಕೊಡಿ. ದಯವಿಟ್ಟು ಅನುದಾನ ಬೇಡಿಕೆಗಳ ಮೇಲಿನ ಚರ್ಚೆಗೆ ಅವಕಾಶ ಕೊಡಿ.

ಅಧ್ಯಕ್ಷರು : ಮಾನ್ಯ ರೇವಣ್ಣನವರೆ, ಈಗಾಗಲೇ ಮಾನ್ಯ ಕಾನೂನು ಮಂತ್ರಿಗಳು ಹೇಳಿದ್ದಾರೆ. ನಾನು ಬೆಳಗ್ಗೆಯಿಂದ ಹೇಳುತ್ತಿದ್ದೇನೆ, ನಿನ್ನೆಯಿಂದಲೂ ಇದೇ ಆಗುತ್ತಿದೆ. ನಿಯಮ 69ರ ವಿಷಯ, ಇದು ಮುಕ್ತಾಯವೇ ಇಲ್ಲ.

ಶ್ರೀ ಹೆಚ್.ಡಿ.ರೇವಣ್ಣ : ಮಾನ್ಯ ಅಧ್ಯಕ್ಷರೆ, ಎರಡೂ ವಿಷಯಗಳು ಮುಖ್ಯವಾದುದು. ಈಗ ಸಭಾನಾಯಕರು ಹೇಳಿದ್ದಾರೆ...

ಅಧ್ಯಕ್ಷರು : ಒಂದು ನಿಮಿಷ, ನಾನು ಹೇಳುವುದನ್ನು ಕೇಳಿ. ಏಕೆ ಹೀಗೆ ಮಾಡುತ್ತೀರಿ? ನೀವು ನಿಲುವಳಿ ಸೂಚನೆಯಡಿಯಲ್ಲಿ ಯಾವ್ಯಾವ ವಿಷಯಗಳನ್ನು ತಂದಿದ್ದೀರಿ ಎಲ್ಲದ್ದಕ್ಕೂ ಅವಕಾಶ ಕೊಟ್ಟಿದ್ದೇವೆ. ನಿಯಮ 69 ರಡಿಯಲ್ಲಿ ಅವಕಾಶ ಕೊಟ್ಟಿದ್ದೇವೆ. ಎಲ್ಲಾ ರೀತಿಯ ಅವಕಾಶವನ್ನು ಕೊಟ್ಟಿದ್ದೇವೆ.

ಶ್ರೀ ಹೆಚ್.ಡಿ.ರೇವಣ್ಣ : ಅದಕ್ಕೆ ನಾನು ಧನ್ಯವಾದಗಳನ್ನು ಹೇಳುತ್ತೇನೆ.

ಅಧ್ಯಕ್ಷರು : ಆದರೆ, ಬೇಡಿಕೆಗಳ ಮೇಲಿನ ಚರ್ಚೆಯಾಗಿಲ್ಲವೆನ್ನುವುದು ಸರ್ಕಾರದ ಕಾಳಜಿ ಇದೆ. ನನ್ನದೂ ಕಾಳಜಿ ಇದೆ. ಗಿಲೆಟಿನ್ pass ಮಾಡಿಕೊಂಡು ಹೋದರು ಎಂದು ನಾಳೆ ನೀವು ಆಪಾದನೆ ಮಾಡುವುದು ಬೇಡ. ನಿಮಗೆ preference ಬೇಕೋ ಬೇಡವೋ? ಉಳಿದ ಶಾಸಕರು ಮಾತನಾಡಲಿಕ್ಕೆ ಆಸಕ್ತಿವುಳ್ಳವರಾಗಿದ್ದಾರೆ. ಆಗ ಏನು ಮಾಡುವುದು? ನಾವು ನಿರ್ಧಾರ ಮಾಡಬೇಕಾದ ಪ್ರಕಾರ ಇವತ್ತು ಸಾಯಂಕಾಲದೊಳಗೆ ಮಾನ್ಯ ಮುಖ್ಯಮಂತ್ರಿಗಳು ಉತ್ತರವನ್ನು ಕೊಡಬೇಕೆಂದು ಇತ್ತು. ಇನ್ನೂ ಆಗಿಲ್ಲ. ಬೇಡಿಕೆಗಳ ಮೇಲಿನ ಚರ್ಚೆ ಯಾವಾಗ ಮಾಡುವುದು? ಮಾನ್ಯ ಮುಖ್ಯಮಂತ್ರಿಗಳು ಯಾವಾಗ ಉತ್ತರ ಕೊಡಬೇಕು? ಆದುದರಿಂದ

ತಾವು time limit ಹಾಕಿಕೊಂಡು ಮಾತನಾಡಿ ಎಂದು ನಾನು ಹೇಳುತ್ತಿದ್ದೇನೆ.

ಶ್ರೀ ಹೆಚ್. ಡಿ. ರೇವಣ್ಣ : ಮಾನ್ಯ ಅಧ್ಯಕ್ಷರೆ, ಬಿಎಸಿ ಸಭೆಯಲ್ಲಿ ರಾತ್ರಿ ಹತ್ತು ಗಂಟೆಯವರೆಗೆ ಸದನವನ್ನು ನಡೆಸಬೇಕೆಂದು ಮಾನ್ಯ ಮುಖ್ಯಮಂತ್ರಿಗಳು ಹೇಳಿದ್ದಾರೆ. ಅದಕ್ಕೆ ನಾವು ಸಿದ್ಧರಿದ್ದೇವೆ. ನಮ್ಮದೇನೂ ಅಭ್ಯಂತರವಿಲ್ಲ.

ಅಧ್ಯಕ್ಷರು : ಹಾಗೇ ಹೇಳುವುದು ಮಾತ್ರವಾಗಿದೆ, ಆದರೆ ಬೇಡಿಕೆಗಳ ಮೇಲಿನ ಚರ್ಚೆ ಇನ್ನೂ ಪ್ರಾರಂಭವಾಗಿಯೇ ಇಲ್ಲ. ಅದು ನಿಮಗೆ ಬಿಟ್ಟಿದ್ದು, ನೀವು ಏನೇ ವಿಷಯ ಚರ್ಚೆ ಮಾಡಲು ಸಿದ್ಧರಿದ್ದರೆ, ನಾನು ಅವಕಾಶ ಕೊಡುತ್ತೇನೆ. ಆದರೆ, ನಾಳೆ ಬೇಡಿಕೆಗಳನ್ನು ಪಾಸ್ ಮಾಡಿಕೊಂಡು ಹೋದರು, ಅದು ಮಾಡಿಕೊಂಡು ಹೋದರು ಎನ್ನುವ ಮಾತುಗಳು ಬರುವುದು ಬೇಡ. ಈ ವಿಷಯದ ಬಗ್ಗೆ ಒಂದು ಗಂಟೆಯಲ್ಲಿ ನಿಮ್ಮ ಚರ್ಚೆ ಮತ್ತು ಅವರ ಉತ್ತರ ಎರಡೂ ಕೂಡ ಮುಕ್ತಾಯವಾಗಬೇಕು. ಸಹಿ ಮಾಡಿರುವಂಥ ಎಲ್ಲಾ ಮಾನ್ಯ ಸದಸ್ಯರುಗಳು ಮಾತನಾಡಬೇಕೆಂದು ಏನೂ ಇಲ್ಲ. ನೀವು ಈಗ ಮಾತನಾಡಿ ಸಾರಿಗೆ ಸಚಿವರು ಆ ಮೇಲೆ ಉತ್ತರ ಕೊಡಲಿ.

ಶ್ರೀ ಹೆಚ್. ಡಿ. ರೇವಣ್ಣ : ಆಯಿತು, ಈಗ ಸಾರಿಗೆ ಸಚಿವರು ಹೇಳಿಕೆ ಕೊಡುವುದಾದರೆ ಕೊಡಲಿ. ನಾನು ನಂತರ ಮಾತನಾಡುತ್ತೇನೆ.

ಶ್ರೀ ಆರ್.ಅಶೋಕ್ (ಸಾರಿಗೆ ಸಚಿವರು) : ಮಾನ್ಯ ಅಧ್ಯಕ್ಷರೆ, ಸಾರಿಗೆ ಇಲಾಖೆಯ ಬಗ್ಗೆ ನಿನ್ನೆಯೂ ಪತ್ರಿಕೆಗಳಲ್ಲಿ ವರದಿಗಳು ಬಂದಿವೆ. ನಾನು ಹೇಳುವುದೇನೆಂದರೆ, ಈಗಾಗಲೇ ಕೆಲವು ಪತ್ರಿಕೆಗಳಲ್ಲಿ ಇದರ ಬಗ್ಗೆ ವರದಿ ಬಂದಿದೆ. ಅದಕ್ಕೆ ನನಗೂ ಭಹಳ ನೋವಾಗಿದೆ. ಆದುದರಿಂದ ಇವತ್ತು ಸದನದಲ್ಲಿ ಇದರ ಬಗ್ಗೆ ಸವಿಸ್ತಾರವಾಗಿ ಚರ್ಚೆಯಾಗಬೇಕೆಂಬುದು ನನ್ನ ಮನವಿ. ಸರ್ಕಾರದ ಪರವಾಗಿ ನಾನು ಹೇಳುತ್ತಿದ್ದೇನೆ, ಇದರ ಬಗ್ಗೆ ಏನೇನು ಇದೆ ಎನ್ನುವುದನ್ನು ದಯವಿಟ್ಟು ಅವರು ಸದನಕ್ಕೆ ಹೇಳಲಿ. ಮುಕ್ತವಾಗಿ ಅವರಿಗೆ ಅವಕಾಶ ಕೊಡಿ.

ಶ್ರೀ ಹೆಚ್. ಡಿ. ರೇವಣ್ಣ : ಮಾನ್ಯ ಅಧ್ಯಕ್ಷರೆ, ಇದರಲ್ಲಿ ಮಾನ್ಯ ಸಾರಿಗೆ ಸಚಿವರು ಪಾತ್ರವಿದೆ ಎನ್ನುವುದನ್ನು ನಾನು ಎಲ್ಲಿಯೂ ಹೇಳಿಲ್ಲ. ಇದರಲ್ಲಿ ಸಾರಿಗೆ ಸಚಿವರ ಪಾತ್ರವಿದೆ ಎನ್ನುವ ಭಾವನೆಯಲ್ಲಿ ಏನಾದರೂ ತಪ್ಪಿದ್ದರೆ, ಸದನಕ್ಕೆ ನಾನು ಮನವರಿಕೆ ಮಾಡುತ್ತೇನೆ.

ಶ್ರೀ ಆರ್. ಅಶೋಕ್ : ಮಾನ್ಯ ರೇವಣ್ಣನವರೆ, ತಮ್ಮಲ್ಲಿ ವಿನಂತಿ ಮಾಡುವುದೇನೆಂದರೆ, ಇವತ್ತು ಒಂದು ಪತ್ರಿಕೆಯಲ್ಲಿ ಮಾತ್ರ ಸಾರಿಗೆ ಇಲಾಖೆಯಲ್ಲಿ "ಸಾರಿಗೆ ಸಚಿವರ ಕೈವಾಡ" ಎಂದೇ ಬಂದಿದೆ. ನನಗೆ ನೋವಾಗಿದೆ. ಅವರ ತರಹ ನಾನು ಧರಣಿ ಮಾಡುವುದಕ್ಕಾಗುವುದಿಲ್ಲ. ನನಗೆ ಇರತಕ್ಕಂಥ limit ಇದು.

ಶ್ರೀ ಹೆಚ್.ಡಿ.ರೇವಣ್ಣ : ನಾನು ವಿಷಯವನ್ನು ಮನವರಿಕೆ ಮಾಡಿಕೊಡಲು ಬಿಡುವುದಿಲ್ಲ ಎಂದರೆ ಹೇಗೆ?

(ಗದ್ದಲ)

ಶ್ರೀ ಆರ್.ಅಶೋಕ್ : ಮಾನ್ಯ ಅಧ್ಯಕ್ಷರೆ, ತಾವು ನನಗೆ ರಕ್ಷಣೆ ಕೊಡಬೇಕು.

ಶ್ರೀ ಆರ್.ರೋಷನ್ ಬೇಗ್ (ಶಿವಾಜಿನಗರ) : ಅಷ್ಟು serious ಆಗಬಾರದು. ಆ ಕಡೆ ನಾನು face ಮಾಡಿದ್ದೇನೆ. ನೀವು ತೆಲಗಿ, ತೆಲಗಿ ಎಂದು ಹೇಳಿದಿರಿ, ಆಗ ನನಗೆ ಧರಣಿ ಮಾಡಲು ಅವಕಾಶವಿತ್ತೇ? ನಾನು ಆಗ face ಮಾಡಲಿಲ್ಲವೇ? ಏರ್‌ಪೋರ್ಟ್‌ನ ಹತ್ತಿರ ಸಾವಿರಾರು ಕೋಟಿ ಜಾಗವನ್ನು ನುಂಗಿ ಹಾಕಿಬಿಟ್ಟರು. ಟೋಪಿ ಹಾಕಿಬಿಟ್ಟರು.

(ಗೊಂದಲ)

ಅಧ್ಯಕ್ಷರು : ಈಗ ಎಲ್ಲಾ ಶಾಸಕರು ಸುಮ್ಮನೆ ನ್ಯಾಯ ಮಾಡುವು ದಕ್ಕಾಗುವುದಿಲ್ಲ.

ಶ್ರೀ ವಿ. ಮುನಿಯಪ್ಪ (ಶಿಡ್ಲಘಟ್ಟ) : ಮಾನ್ಯ ಅಧ್ಯಕ್ಷರೆ, ಎಲ್ಲಾ ಪತ್ರಿಕೆಗಳಲ್ಲಿಯೂ ಬರುತ್ತಿದೆ. ಸಂಬಂಧಪಟ್ಟ ಮಂತ್ರಿಗಳು ಅದರ ಬಗ್ಗೆ ಕಾಳಜಿ ವಹಿಸುತ್ತಿದ್ದಾರೆ. ಇಡೀ ಸದಸ್ಯರು ಅವರೂ ಕೂಡ ಪ್ರಸ್ತಾಪ ಮಾಡುತ್ತಿದ್ದಾರೆ. ಕಳೆದ 15 ದಿವಸಗಳಿಂದ ನಡೆಯುತ್ತಿರುವಂಥ ನಮ್ಮ ಸಭೆಯ ನಡವಳಿಕೆ ಗಳನ್ನು ನೋಡಿದರೆ, ಬಹುಶಃ ನಾವು ನಾವು ಇವತ್ತಿಗೂ ರೆಗ್ಯುಲರ್ ಅಜೆಂಡಾಕ್ಕೆ ಬರುವುದಕ್ಕಾಗಲಿಲ್ಲ. ನಮ್ಮ ಭಾಗ ಅನೇಕ ಸಮಸ್ಯೆಗಳನ್ನು ಸರ್ಕಾರದ ಗಮನಕ್ಕೆ ತರಬೇಕಾಗಿದೆ. ಬೇಡಿಕೆಗಳ ಸಂದರ್ಭಗಳಲ್ಲೇ ಅದಕ್ಕೆ ಅವಕಾಶ ಸಿಗುವಂಥಾದ್ದು. ಆ ಅವಕಾಶ ಈಗಾಗಲೇ ಸಂಪೂರ್ಣವಾಗಿ ಹೊರಟು ಹೋಗಿದೆ. ಬೇಡಿಕೆಗಳ ಮೇಲಿನ ಚರ್ಚೆಗೆ ಸ್ವಲ್ಪ ಅವಕಾಶ ಮಾಡಿ ಕೊಡಿ. ಇಂತಹ ವಿಚಾರಗಳನ್ನು ಚರ್ಚೆ ಮಾಡುವುದಕ್ಕೆ ಪ್ರತ್ಯೇಕವಾಗಿ ಒಂದೆರೆಡು ದಿನಗಳನ್ನು ನಿಗದಿ ಮಾಡಿ. ನೀವು ನಾಳೆ ಗಿಲೆಟಿನ್

ಹಾಕಿಕೊಂಡು ಹೋದರೆ, ನಾವು ನಿಮ್ಮ ಹತ್ತಿರ ಏನು ಮಾತನಾಡುವುದು? ನಮ್ಮ ಸಮಸ್ಯೆಗಳನ್ನು ಸರ್ಕಾರ ಹೇಗೆ ಪರಿಹರಿಸುತ್ತದೆ?

ಅಧ್ಯಕ್ಷರು : ಬೇಡಿಕೆಗಳ ಮೇಲೆ ಚರ್ಚೆಯಾಗುತ್ತಿಲ್ಲವೆಂದು ಈ ರೀತಿ ಸದಸ್ಯರ ಭಾವನೆಗಳಿರುತ್ತವೆ.

ಶ್ರೀ ಹೆಚ್. ಸಿ. ಬಾಲಕೃಷ್ಣ : ಒಂದು ವಾರ ಅಧಿವೇಶನವನ್ನು ಮುಂದುವರೆಸಿ.

ಅಧ್ಯಕ್ಷರು : ಈ ವಿಷಯಗಳನ್ನು ಬಜೆಟ್ ಮೇಲಿನ ಚರ್ಚೆ ಬಂದಾಗ ಮಾತನಾಡಬಹುದಲ್ಲವೇ? ಉದಾಹರಣೆಗೆ ಸಾರಿಗೆ ವಿಷಯಗಳು ಬಂದಾಗ ಇದನ್ನೂ ಮಾತನಾಡಬಹುದಾಗಿತ್ತು.

(ಗೊಂದಲ)

ಶ್ರೀ ಅಮರೇಗೌಡ ಎಲ್.ಬಯ್ಯಾಪುರ : ಸಮಯವನ್ನು correct ಆಗಿ ನಿಗದಿ ಮಾಡಿ. ಬೇಡಿಕೆಗಳ ಮೇಲೆ ಚರ್ಚೆಯಾದ ನಂತರ ಒಂದು ವಾರದ ಮೇಲೆ ಬೇರೆ ಬೇರೆ ವಿಷಯಗಳ ಬಗ್ಗೆ ಚರ್ಚೆಯಾಗಲಿ. ತಪ್ಪೇನು ಇದೆ? ರಾಜ್ಯದ ಜನತೆಗೆ ಮನವರಿಕೆಯಾಗಲಿ. ಇನ್ನು ಎಂಟು ದಿನ ಅಧಿವೇಶನ ಇರಲಿ.

ಶ್ರೀ ಕೆ. ಎಂ. ಕೃಷ್ಣಮೂರ್ತಿ (ಕಡೂರು) : ಮಾನ್ಯ ಅಧ್ಯಕ್ಷರೆ, ಒಂದು ವಾರ ಅಧಿವೇಶನವನ್ನು ಮುಂದಕ್ಕೆ ಹಾಕಿ. ಏಕೆಂದರೆ, ಬೇಡಿಕೆಗಳ ಬಗ್ಗೆ ಬಹಳ ಚರ್ಚೆಯಾಗಬೇಕು, ಎಲ್ಲಾ ಶಾಸಕರ ಕ್ಷೇತ್ರದ ಸಮಸ್ಯೆಯಿದೆ. ಈಗ ನೀವು ಮಾನ್ಯ ರೇವಣ್ಣನವರಿಗೆ ಅವಕಾಶ ಕೊಟ್ಟಿದ್ದೀರಿ, 64 ಇಲಾಖೆಯ ಬೇಡಿಕೆಯ ಬಗ್ಗೆ ಮಾತನಾಡಬೇಕು. ನಾವು ಬೇಡಿಕೆಗಳ ಬಗ್ಗೆ ಮಾತನಾಡದೇ ಹೋದರೆ, ನಮ್ಮ ಕ್ಷೇತ್ರದ ಪರಿಸ್ಥಿತಿ ಬಗ್ಗೆ, ಜಿಲ್ಲಾ ಪಂಚಾಯಿತಿಗಳ ಪರಿಸ್ಥಿತಿಗಳು, ಗ್ರಾಮ ಸಭೆ ನಡೆಯದೇ ಜಿಲ್ಲಾ ಪಂಚಾಯತ್‌ಗಳು ನಡೆಯುತ್ತಿವೆ. ಇವೆಲ್ಲ ವಿಷಯಗಳು ಬೇಡಿಕೆಗಳ ಮೇಲೆ ಮಾತನಾಡುವುದಕ್ಕೆ ಅವಕಾಶವಿದೆಯೇ ಹೊರತು, ಬೇರೆ ಯಾವುದೇ ಕಾರ್ಯಕಲಾಪಗಳಲ್ಲಿ ಮಾತನಾಡುವುದಕ್ಕೆ ಅವಕಾಶವಿಲ್ಲ. ದಯವಿಟ್ಟು 5ನೇ ತಾರೀಖಿನವರೆಗೂ ಅಧಿವೇಶನವನ್ನು ನಡೆಸಿ.

ಅಧ್ಯಕ್ಷರು : ಅದನ್ನೇ ನಾನೂ ಹೇಳುತ್ತಿರುವುದು. ಬೇಡಿಕೆಗಳ ಮೇಲಿನ ಚರ್ಚೆ ಬಂದಾಗ ಇವೆಲ್ಲಾ ವಿಷಯಗಳ ಬಗ್ಗೆ ನೀವು ಮಾತನಾಡ ಬಹುದು. ಅವರು ಕೇಳಿದ ಮೇಲೆ ಕೊಡಬೇಕಾಗುತ್ತದೆ.

(ಗೊಂದಲ)

ಶ್ರೀ ಹೆಚ್. ಡಿ. ರೇವಣ್ಣ : ಮಾನ್ಯ ಅಧ್ಯಕ್ಷರೆ, ತಾವು ಈ ನಿಲುವಳಿ ಸೂಚನೆಯನ್ನು 69ಗೆ convert ಮಾಡಿ, ಚರ್ಚೆ ಮಾಡಲು ಅವಕಾಶ ಕೊಟ್ಟಿದ್ದೀರಿ, ಅದಕ್ಕೆ ಮೊದಲನೆಯದಾಗಿ ನಾನು ವಂದನೆಗಳನ್ನು ಸಲ್ಲಿಸುತ್ತಿದ್ದೇನೆ. ಮಾನ್ಯ ಸಾರಿಗೆ ಸಚಿವರು ಇವತ್ತು ಪತ್ರಿಕೆಗಳಲ್ಲಿ ಬಂದಿರುವ ವಿಷಯಗಳನ್ನು ಹೇಳಿದರು. ಅದು ಬರಬೇಕಾದರೆ, ಕಾರಣಗಳೇನು? ಪತ್ರಿಕೆಗಳಲ್ಲಿ ಯಾವ ಕಾರಣಕ್ಕೋಸ್ಕರ ಬಂದಿದೆ ಎನ್ನುವ ವಿಷಯಗಳನ್ನು ತಮ್ಮ ಮುಖೇನ ಸರ್ಕಾರಕ್ಕೆ ಮನವರಿಕೆ ಮಾಡಿಕೊಡಬೇಕಾಗುತ್ತದೆ. ಇದರಲ್ಲಿ ಮಾನ್ಯ ಸಾರಿಗೆ ಸಚಿವರ ಕೈವಾಡವಿದೆ ಎಂದು ನಾನು ಹೇಳುತ್ತಿಲ್ಲ. ಯಾರ ಕೈವಾಡವಿದೆ ಎನ್ನುವುದನ್ನು ನಾನು ಮನವರಿಕೆ ಮಾಡುತ್ತೇನೆ. ನಂತರ ಸರ್ಕಾರ ಉತ್ತರ ಕೊಡಲಿ. ಭಾರತ ಸರ್ಕಾರ, ದಿನಾಂಕ: 28.3.2001 ರಲ್ಲಿ ಪತ್ರ ಸಂಖ್ಯೆ: 22 ಇ ಮತ್ತು So.No. 1041E ದಿನಾಂಕ: 16.10.2001 ರಲ್ಲಿ ಭಾರತ ದೇಶದಲ್ಲಿ ಎಲ್ಲಾ ಮೋಟಾರು ವಾಹನಗಳಿಗೆ ಏಕ ರೂಪ ನೋಂದಣಿ ಫಲಕಗಳನ್ನು ಒಳಪಡಿಸುವ, ಅವುಗಳ ಕಳವು ಮತ್ತು ದುರುಪಯೋಗಗಳನ್ನು ತಡೆಗಟ್ಟುವ ಸಲುವಾಗಿ, ವಾಹನಗಳನ್ನು ಬಳಸಿ ನಡೆಸುವ ಉಗ್ರಗಾಮಿಗಳ ಚಟುವಟಿಕೆಗಳು, ನಕ್ಸಲ್ ಚಟುವಟಿಕೆ ಮತ್ತು ಇನ್ನಿತರ ಅಪರಾಧಗಳನ್ನು ತಡೆಗಟ್ಟುವ ಸಲುವಾಗಿ, ಮತ್ತು ದೇಶದ ಸುಭದ್ರತೆಯನ್ನು ಕಾಪಾಡುವ ಸಲುವಾಗಿ, ಮೋಟಾರು ವಾಹನಗಳ ನಿಯಮ 1889 ರ ನಿಯಮ 50ಕ್ಕೆ ತಿದ್ದುಪಡಿ ಮಾಡಿರುತ್ತದೆ.

ಬೇಕಾದರೆ ಇದನ್ನು ತಮ್ಮ ಗಮನಕ್ಕೆ ಕಳುಹಿಸಿಕೊಡುತ್ತೇನೆ. ಇದಾದ ನಂತರ 8950ರ ತಿದ್ದುಪಡಿಯನ್ನು ಕಾರ್ಯರೂಪಕ್ಕೆ ತರುವ BOT ಆಧಾರದ ಮೇಲೆ ಕರ್ನಾಟಕ ಸರ್ಕಾರವು ದಿನಾಂಕ: 29.8.2005ರಲ್ಲಿ ಟೆಂಡರ್ ಕರೆಯಿತು. ಬಿಡ್ ಆಹ್ವಾನದ ಮಂತ್ರಿಯನ್ನು ಸಾರಿಗೆ ಸಚಿವರು ಗಮನಕ್ಕೆ ತರುತ್ತಿದ್ದೇನೆ. 2005ರ ಬಿಡ್ ಪ್ರಕ್ರಿಯೆಯಲ್ಲಿ ಯಾರು ತಪ್ಪು ಮಾಡಿದ್ದಾರೋ ಬಿಟ್ಟಿದ್ದಾರೋ ಅದನ್ನೂ ನಿಮ್ಮ ಗಮನಕ್ಕೆ ತರುತ್ತಿದ್ದೇನೆ. ನೀವು ಮಾಡಿದ್ದೀರಿ ಎಂಬ ಭಾವನೆಯನ್ನು ನಾನು ತಾಳುತ್ತಿಲ್ಲ. ಯಾರೋ ಮಾಡಿರುವ ತಪ್ಪು, ಇವರಲ್ಲ, ಯಾರೋ ಮಾಡಿದ್ದಾರೆಂದು...ದಯಮಾಡಿ ನೀವು (ಕಟ್ಟಾ ಸುಬ್ರಹ್ಮಣ್ಯನಾಯ್ಡು) ಸ್ವಲ್ಪ ಸುಮ್ಮನಿರಿ. ನಿಮಗೆ ಸಾರಿಗೆ ಇಲಾಖೆಯು ಬರುವುದಿಲ್ಲ. ನೀವು ಏನಿದ್ದರೂ ನೀವು ಬಿಡುವುದು,

BWSSB. ಈ ಬಿಡ್ ಪ್ರಕ್ರಿಯೆಯಲ್ಲಿ Karnataka Transmission Public Prevention Rules, 2000 IFA No. TRD 324, 324, TIM 2004 ರ ಸೂಚನಾ ನಿಯಮಗಳನ್ನು ಅನುಸರಿಸಿ ನಡೆಸಬೇಕಾಗಿತ್ತು, ನಡೆಸಿಲ್ಲ. ಇದರಲ್ಲಿ ಸರ್ಕಾರದ ಬಿಡ್ ಆಹ್ವಾನದಂತೆ ದಿನಾಂಕ: 29.8.2005 ಬಿಡ್ ಮಾಡಿದರು. ಆ ಬಿಡ್‌ನಲ್ಲಿ ಏಳು ಕಂಪನಿಗಳು ಭಾಗವಹಿಸುತ್ತವೆ. ಮೊದಲನೆಯ ಕಂಪನಿ Seiman Hutch Company, ಎರಡನೆಯದು, Tonis, ಮೂರನೆಯದು, Real Mezon. ಈ ಮೂರೂ ಕಂಪನಿಗಳು ಒಂದೇ ಕಂಪನಿಗೆ ಸೇರಿದವು ಗಳಾಗಿವೆ. ನಾನು 1,2,3 ಎಂದು ಏನು ಹೇಳಿದೆ, ಅವೆಲ್ಲವೂ ಒಂದೇ ಕಂಪನಿ ಎಂಬುದಕ್ಕೆ ನನ್ನ ಬಳಿ ಮಾಹಿತಿ ಇದೆ. ಈ ಕುರಿತು ಸರ್ಕಾರದ ಬಳಿ ಮಾಹಿತಿ ಇದೆಯೋ ಏನೋ ನನಗೆ ಗೊತ್ತಿಲ್ಲ. ಈ ಮೂರು ಕಂಪನಿಗಳು ಒಂದೇ ಕಂಪನಿಗೆ ಸೇರಿದ್ದರೂ, ಮೂರು ಕಂಪನಿಗಳೆಂದು ಮಾಡಿ ಕೊಟೇಶನ್ ಸಲ್ಲಿಸಿರುವುದನ್ನು ತಮ್ಮ ಗಮನಕ್ಕೆ ಅನಂತರ ಕಳುಹಿಸಿ ಕೊಡುತ್ತೇನೆ. ನಾಲ್ಕನೆಯದು, ಪ್ರಮುಖವಾದುದು Hopcom, Hindu Industries, DD Industries, Empire Granite...ಹೀಗೆ ಒಟ್ಟು ಏಳು ಕಂಪನಿಗಳು. ಇದರಲ್ಲಿ ಮೂರು ಕಂಪನಿಗಳು ಒಂದೇ ಕುಟುಂಬಕ್ಕೆ ಸೇರಿರುವುದನ್ನು ಸಭಾಧ್ಯಕ್ಷರ ಮುಖಾಂತರ ತಮ್ಮ ಗಮನಕ್ಕೆ ತರುತ್ತಿದ್ದೇನೆ.

ಈ ವ್ಯಕ್ತಿಗಳು, ಈ ಕಂಪನಿಗಳು ಏನು ಕೊಟ್ಟಿದ್ದಾರೆ, tender condition ನಲ್ಲಿ ಏನು ಹೇಳುತ್ತಾರೆಂದರೆ, ಯಾವುದಾದರೂ ಬಿಡ್‌ನಲ್ಲಿ ಭಾಗವಹಿಸಬೇಕಾಗಿದ್ದರೆ, ನಾಲ್ಕು ರಾಷ್ಟ್ರಗಳಲ್ಲಿ ಅನುಭವ ಹೊಂದಿರಬೇಕೆಂಬ ಷರತ್ತನ್ನು ವಿಧಿಸಿದ್ದಾರೆ. ನನಗೆ ಅಷ್ಟು ಅನುಭವವಿಲ್ಲ. ನೀವು ಸ್ವಲ್ಪ ದಯಮಾಡಿ ಇರಿ, ಮಾತನಾಡುವಾಗ ನಮಗೇಕೆ ತೊಂದರೆಯುಂಟು ಮಾಡುತ್ತೀರಿ? ಅನಂತರ ಬೇಕಾದರೆ ನೀವೇ (ಕಟ್ಟಾ ಸುಬ್ರಹ್ಮಣ್ಯನಾಯ್ಡು) ಸಾರಿಗೆ ಸಚಿವರ ಪರವಾಗಿ ಉತ್ತರ ಕೊಡಿ, ದಯಮಾಡಿ ಇರಿ. ಅವರ ಬಗ್ಗೆ ನಾನು ಆಪಾದನೆ ಮಾಡುತ್ತಿಲ್ಲ. ಸರ್ಕಾರದ ಹಣ ಹೀಗೆ ಆಗುತ್ತಿದೆ ಎಂಬುದನ್ನು ತಮ್ಮ ಗಮನಕ್ಕೆ ತರುತ್ತಿದ್ದೇನೆ. ಏಳು ಕಂಪನಿಗಳು ಇದೆಯಲ್ಲ, ಅವರು ಬಿಡ್‌ನಲ್ಲಿ ಭಾಗವಹಿಸಬೇಕಾಗಿದ್ದರೆ, ನಾಲ್ಕು ರಾಷ್ಟ್ರಗಳಲ್ಲಿ ಅವರಿಗೆ ಅನುಭವ. ಅದರಲ್ಲಿ ಏನಾಗಿದೆಯೆಂದರೆ, ಮೊದಲು ಸಿಮಿತ್ ಕುಕೇನ್ ಕಂಪನಿಗೆ ಕೊಡಬೇಕೆಂಬ ಮಾಹಿತಿಯನ್ನು ನಾನು ಹೇಳುತ್ತಿಲ್ಲ. ಇದರ ಬಗ್ಗೆ

ಕೊನೆಗೆ ಹೇಳುತ್ತೇನೆ. ಏಕೆಂದರೆ, ಇದನ್ನು ಯಾವ ಉದ್ದೇಶದಿಂದ ಇವತ್ತು ತಂದಿದ್ದೇನೆ ಎಂಬುದನ್ನು ನಾನು ಕೊನೆಗೆ ಹೇಳುತ್ತೇನೆ.

ಇದರಲ್ಲಿ Times of India ಪತ್ರಿಕೆಯಲ್ಲಿ ಬಂದಿರುವ ಒಂದು ವಿಷಯವನ್ನು ಹೇಳುತ್ತೇನೆ. Times of India ಪತ್ರಿಕೆ ಅಲ್ಲದೆ ಇನ್ನೊಂದು Deccan Herald ಪತ್ರಿಕೆಯಲ್ಲಿ ಹೇಳಿಕೆ ಕೊಟ್ಟಿರುವುದನ್ನು ಅನಂತರ ಕೊನೆಯಲ್ಲಿ ನಿಮ್ಮ ಗಮನಕ್ಕೆ ತರುತ್ತೇನೆ. ಈ ಕಂಡೀಷನ್ ಹಾಕಿದಾಗ ಯಾರು eligible ಇರುತ್ತೀರಿ, ಸರ್ಕಾರದಲ್ಲಿ ನಿಮ್ಮ ಯಾವ ಅಧಿಕಾರಿಗಳು ಪತ್ರಿಕೆ ಹೇಳಿಕೆ ಕೊಟ್ಟಿದಾರೆ. ಆ ವ್ಯಕ್ತಿ ನಾಲ್ಕು ರಾಷ್ಟ್ರಗಳಲ್ಲಿ ಅನುಭವ ಹೊಂದಿಲ್ಲ ಎಂಬುದನ್ನು ಸರ್ಕಾರದ ಗಮನಕ್ಕೆ ತರುತ್ತಿದ್ದೇನೆ. ಇದೇ ವ್ಯಕ್ತಿ ಇವತ್ತು ಈ ಸರ್ಕಾರ ಏನು ಕೊಡಬೇಕು, ಈ ಕಡೆ ಹೇಳುತ್ತಾರೆ. Times of India ದಲ್ಲಿ ಇವರಿಗೆ tender contract ನಲ್ಲಿ ರೂ.550.00 ಅನ್ನು two wheeler vehicles ರೂ. 650.00 three wheeler vehiclesಗೆ, ರೂ. 1,200.00 four wheeler vehiclesಗೆ ಎಂದು ಸ್ಟೇಟ್‌ಮೆಂಟ್ ಕೊಟ್ಟರು. Times of India ನಾನು ಹೇಳಿಕೆ ಕೊಟ್ಟಿಲ್ಲವೆಂದು ಅವರ ಇಲಾಖೆಯ ಹಿರಿಯ ಅಧಿಕಾರಿಗಳೇ ಹೇಳಿಕೆ ಕೊಟ್ಟಿರುವುದನ್ನು ತಮ್ಮ ಗಮನಕ್ಕೆ ತರುತ್ತಿದ್ದೇನೆ. ಬಾಂಬೆ ಕಂಪನಿಗೆ ನಾವು ಕೊಟ್ಟಿದ್ದೇವೆಂದು ಪತ್ರಿಕೆಯಲ್ಲಿ ಹೇಳಿದ್ದಾರೆ. Bombay based Company ಯಾವುದು ಇದೆಯೋ, ಅದಕ್ಕೆ ಕೊಟ್ಟಿದ್ದೇವೆಂದು Times of India ಮತ್ತು Deccan Herald ಪತ್ರಿಕೆಯಲ್ಲಿ ಈಗಾಗಲೇ ಹೇಳಿರುವುದನ್ನು ತಮ್ಮ ಮಾಹಿತಿಗೆ ತರುತ್ತಿದ್ದೇನೆ.

ಅಧ್ಯಕ್ಷರು : ರೇವಣ್ಣನವರೆ, ಊಟವಾದ ನಂತರ ತೆಗೆದುಕೊಳ್ಳೋಣವೇ?

ಶ್ರೀ ಹೆಚ್. ಡಿ. ರೇವಣ್ಣ : 15 ನಿಮಿಷದೊಳಗೆ ಮುಗಿಸುತ್ತೇನೆ.

ಅಧ್ಯಕ್ಷರು : ಈಗ 2.00 ಗಂಟೆಯಾಯಿತು. ಐದು ನಿಮಿಷದಲ್ಲಿ ಮುಗಿಸುತ್ತೀರಾ? ಊಟವಾದ ಬಳಿಕ ಕುಳಿತುಕೊಳ್ಳೋಣವೇ?

ಶ್ರೀ ಹೆಚ್. ಡಿ. ರೇವಣ್ಣ : ಉತ್ತರವನ್ನು ಊಟವಾದ ಬಳಿಕವೇ ಕೊಡಲಿ. ಉತ್ತರ ಕೊಡುವುದಕ್ಕೆ ಅವರು ಒಂದು ಗಂಟೆ ರೆಡಿಯಾಗಬೇಕು.

ಅಧ್ಯಕ್ಷರು : ತಾವು 3.00 ಗಂಟೆಗೆ ಪುನಃ ಮುಂದುವರೆಸಿ.

ಶ್ರೀ ಹೆಚ್. ಡಿ. ರೇವಣ್ಣ : ಮಾನ್ಯ ಸಭಾಧ್ಯಕ್ಷರೆ, ಈ ಕಂಪನಿಯವರು ನಮ್ಮ ರಾಜ್ಯದಲ್ಲಿ ಟೆಂಡರ್ ಹಾಕಬೇಕಾದರೆ...ಫ್ರೆಂಡ್ ಆಗಿದ್ದರೆ ಅವನನ್ನು ಒಳಕ್ಕೆ ಹಾಕಿ, ತಲೆ ಏಕೆ ಕೆಡಿಸಿಕೊಳ್ಳುತ್ತೀರಿ? ದಯಮಾಡಿ ಸ್ವಲ್ಪ ಶಾಂತಿಯಿಂದ ಇರಿ. ಇದರಲ್ಲಿ ನಾಲ್ಕು ರಾಷ್ಟ್ರಗಳಲ್ಲಿ ಅನುಭವ ಹೊಂದಿರುವುದನ್ನು ಕೊಡಬೇಕಾಗಿತ್ತಲ್ಲ, ಆ ನಾಲ್ಕು ರಾಷ್ಟ್ರಗಳ ರಾಯಭಾರ ಕಛೇರಿಗಳಿಂದ Indian Embassy ಗೆ ಪತ್ರ ಬಂದಿರುವುದನ್ನು ತಮಗೆ ಕಳುಹಿಸಿಕೊಡುತ್ತೇನೆ. ಅದರಲ್ಲಿ ಏನು ಹೇಳುತ್ತಾರೆಂದು, ಈ ದೇಶಗಳಲ್ಲಿ ಇವರು ಏನೂ ಮಾಡಿಲ್ಲ, ಅಲ್ಲಿ ಈ ಕಾಯಿದೆ ಇನ್ನೂ ಜಾರಿಗೆ ಬಂದಿಲ್ಲ ಎನ್ನುತ್ತಾರೆ. ಆ ರಾಷ್ಟ್ರಗಳಲ್ಲಿ ಅನುಭವ ಹೊಂದಿದ್ದೇವೆಂದು ಅವರು ನಕಲಿ ಸರ್ಟಿಫಿಕೇಟ್ ಕೊಡುತ್ತಾರೆ. ಇಂತಹುದು ಎರಡು ಇದೆ. ಇದರ ದಾಖಲಾತಿಗಳನ್ನು ತಮ್ಮ ಗಮನಕ್ಕೆ ಕಳುಹಿಸಿಕೊಡುತ್ತೇನೆ.

ಇದಾದ ನಂತರ, ಇವತ್ತು ಈ ಕಂಪನಿ ರಾಜಸ್ಥಾನ, ಗೋವಾ, ಮಹಾರಾಷ್ಟ್ರ, ಪಾಂಡಿಚೆರಿ, ಪಶ್ಚಿಮ ಬಂಗಾಲ, ಈ ರೀತಿ ಒಂದೇ ಕಡೆಯಲ್ಲ, ಎಲ್ಲಾ ಕಡೆಗಳಲ್ಲಿ ಇರುವ ಟೆಂಡರ್‌ನಲ್ಲಿ ಭಾಗವಿಹಿಸಿದ್ದಾರೆ. ಈ ಕಂಪನಿಯವರು ತಾವು ಏನು ಕೊಡಬೇಕೆಂದು ನಿರ್ಣಯ ಮಾಡಿದ್ದಾರೆಂದು ಹೇಳುತ್ತೇನೆ. ಆ ಕಂಪನಿಯವರು ಕರ್ನಾಟಕ ರಾಜ್ಯದ ಜೊತೆಗೆ ರಾಜಸ್ಥಾನ, ಗೋವಾ, ಪಾಂಡಿಚೆರಿ, ಹೀಗೆ ಬೇರೆ ರಾಜ್ಯಗಳಲ್ಲೂ ಇವರು ಭಾಗವಹಿಸಿದ್ದಾರೆ. ಅಲ್ಲಿ ಭಾಗವಹಿಸಿ ಏನು ರೇಟ್ ಹಾಕಿದ್ದಾರೆಂದು ಬೇಕಾದರೆ ಸರ್ಕಾರ ಹೇಳಲಿ ಅಥವಾ ನಾನು ಹೇಳುವುದಕ್ಕೆ ಪ್ರಯತ್ನ ಮಾಡುತ್ತೇನೆ. ಗೋವಾದಲ್ಲಿ ಇದೇ ಕಂಪನಿಯ ಮೇಲೆ ಸಾರ್ವಜನಿಕರು ಒಂದು PIL ಹಾಕಿರುವ ಪರಿಣಾಮ ಅಲ್ಲಿನ ಉಚ್ಚ ನ್ಯಾಯಾಲಯವು ಸ್ಟೇ ಕೊಟ್ಟಿರುವುದೂ ಇದೆ. ರಾಜಸ್ಥಾನದಲ್ಲಿ ಆಡಳಿತ ನಡೆಸುತ್ತಿರುವ ಬಿ.ಜೆ.ಪಿ. ಸರ್ಕಾರವೇ ಈ ಕಂಪನಿ ಮೇಲೆ 'ಇದು ಸರಿಯಲ್ಲ. ಈ ಕಂಪನಿಯು ಸುಳ್ಳು ದಾಖಲಾತಿಗಳನ್ನು ಕೊಟ್ಟಿದೆ' ಎಂದು ಅವರು ಕೊಟ್ಟಿರುವ ಟೆಂಡರ್ ಅನ್ನು ವಾಪಸ್ಸು ತೆಗೆದುಕೊಂಡಿದ್ದಾರೆ. ರಾಜಕೀಯ ಒತ್ತಡಕ್ಕೆ ಅಲ್ಲಿ ಟೆಂಡರ್ ಕೊಟ್ಟರು. ಅಲ್ಲಿ ಬಿಜೆಪಿಯ ಸರ್ಕಾರ ಇತ್ತು. ರಾಜಕೀಯ ಒತ್ತಡಕ್ಕೋಸ್ಕರ ಈ ಟೆಂಡರ್ ಕೊಟ್ಟಿರುವುದಿದೆ. ಟೆಂಡರ್ ಕೊಟ್ಟ ನಂತರ ಅಲ್ಲಿ ಸುಳ್ಳು ದಾಖಲೆಗಳನ್ನು ಯಾರ influence ಮೇಲೆ ಕೊಟ್ಟರೋ, ಬಿಟ್ಟರೋ, ಅವರು ಆ ಕುರಿತಾದ ಮಾಹಿತಿಗಳನ್ನು ತರಿಸಿಕೊಂಡು ಹೇಳಲಿ, ನನಗೆ ಗೊತ್ತಿಲ್ಲ. ಆದರೆ, ಮತ್ತೆ

ಸುಳ್ಳು ದಾಖಲೆಗಳನ್ನು ಕೊಟ್ಟಿದ್ದಾರೆಂಬ ಕಾರಣಕ್ಕೋಸ್ಕರ, ಈ ಟೆಂಡರ್ ಅನ್ನು ವಜಾಗೊಳಿಸಿದ್ದಾರೆ. ಇವತ್ತೂ ಸಹ Anti Corruption Bureau (AVB) ದಿಂದ enquiry ನಡೆಯುತ್ತಿದೆ. ರಾಜಸ್ಥಾನ ಸರ್ಕಾರವು ಇವತ್ತಿಗೂ ಇವರ ಮೇಲೆ Anti Corruption Bureau ದಿಂದ ಎನ್‌ಕ್ವೈರಿ ನಡೆಸುತ್ತಿದೆ. Till today, ಇವತ್ತಿಗೂ enquiry ನಡೆಯುತ್ತಿದೆ. ಅಂತಹ ಒಂದು ಕಂಪನಿ, ಯಾರೋ ಸದನದಲ್ಲಿ ಇಲ್ಲದೇ ಇರುವ ವ್ಯಕ್ತಿಯ ಹೆಸರನ್ನು ಪ್ರಸ್ತಾಪಿಸುವುದಕ್ಕೆ ನಾವು ಹೋಗುವುದಿಲ್ಲ. ಯಾರೋ ಮುಖಂಡರ influence ಮೇಲೆ ರಾಜಸ್ಥಾನದಲ್ಲಿ ಕೊಟ್ಟರು. ಮತ್ತೆ ಆಪಾದನೆ ಬಂದ ನಂತರ ವಾಪಸ್ಸು ತೆಗೆದುಕೊಂಡರು. ಸದನದಲ್ಲಿ ಇಲ್ಲದೇ ಇರುವ ವ್ಯಕ್ತಿಯ ಹೆಸರನ್ನು ಹೇಳುವುದು ಸೂಕ್ತವಲ್ಲವೆಂಬುದು ನನ್ನ ಭಾವನೆಯಾಗಿದೆ. ಅದಕ್ಕೋಸ್ಕರ ನಾನು ಹೇಳು ವುದಿಲ್ಲ.

(2-00 PM)

ಇದು ಆದಮೇಲೆ, ಯಾರು ಸಾರಿಗೆ ಆಯುಕ್ತರಿದ್ದಾರೆ ಅವರು Times of India and Deccan Herald ಪತ್ರಿಕೆಯಲ್ಲಿ ಹೇಳಿಕೆಯನ್ನು ಕೊಟ್ಟಿರತಕ್ಕದ್ದು. ಅವರು ಏನು ಹೇಳುತ್ತಾರೆಂದರೆ, ಕರ್ನಾಟಕದಲ್ಲಿ ದ್ವಿಚಕ್ರ ವಾಹನಕ್ಕೆ 550 ರೂಪಾಯಿ, ತ್ರಿಚಕ್ರ ವಾಹನಕ್ಕೆ 650 ರೂಪಾಯಿ ಮತ್ತು ನಾಲ್ಕು ಚಕ್ರ ವಾಹನಕ್ಕೆ 1200 ರೂಪಾಯಿ. ಪಶ್ಚಿಮ ಬಂಗಾಳದಲ್ಲಿ ಇದೇ ರೀತಿ ಟೆಂಡರ್ ಆಗಿ ಅಲ್ಲಿ ದ್ವಿಚಕ್ರ ವಾಹನಕ್ಕೆ 282 ರೂಪಾಯಿ, ತ್ರಿಚಕ್ರ ವಾಹನಕ್ಕೆ 298 ರೂಪಾಯಿ ಮತ್ತು ನಾಲ್ಕು ಚಕ್ರ ವಾಹನಕ್ಕೆ 441 ರೂಪಾಯಿ, ನಮ್ಮದಕ್ಕೂ ಅವರದಕ್ಕೂ ವ್ಯತ್ಯಾಸ ಎಷ್ಟು ಎಂದರೆ ನಾಲ್ಕು ಚಕ್ರ ವಾಹನಕ್ಕೆ ಅಲ್ಲಿ 441 ರೂಪಾಯಿ, ಇಲ್ಲಿ 1200 ರೂಪಾಯಿಗಳು, ಹಾಗಾದರೆ ಸುಮಾರು 759 ರೂಪಾಯಿ ನಮ್ಮಲ್ಲಿ ಜಾಸ್ತಿ. ನಮ್ಮ ರಾಜ್ಯದಲ್ಲಿ ಎಲ್ಲಾ ರೀತಿಯ ವಾಹನವೂ ಸೇರಿ ಒಟ್ಟಾರೆ ಸುಮಾರು 80 ಲಕ್ಷ ವಾಹನಗಳಿವೆ. ಇದು ಹಳೆಯ registration ಆಗಿರತಕ್ಕದ್ದು. ಅದೇ ಪಶ್ಚಿಮ ಬಂಗಾಳದಲ್ಲಿರುವುದು ಕೇವಲ 35 ಲಕ್ಷ ವಾಹನಗಳು. ಆ 35 ಲಕ್ಷದಲ್ಲಿ ದ್ವಿಚಕ್ರ ವಾಹನಗಳು 10 ಲಕ್ಷ, ತ್ರಿಚಕ್ರ ವಾಹನಗಳು 3 ಲಕ್ಷ, ನಾಲ್ಕು ಚಕ್ರದ ವಾಹನಗಳು 12 ಲಕ್ಷ. ಲಾರಿ ಎಲ್ಲಾ ಸೇರಿದರೆ 35 ಲಕ್ಷ. ನಮ್ಮ ರಾಜ್ಯದಲ್ಲಿ ದ್ವಿಚಕ್ರ ವಾಹನಗಳು 35 ಲಕ್ಷ, ಚಕ್ರವಾಹನಗಳು 8 ಲಕ್ಷ, ನಾಲ್ಕು ಚಕ್ರದ ವಾಹನಗಳು 30 ಲಕ್ಷ. ಭಾರಿ ವಾಹನಗಳು 4 ಲಕ್ಷ. ಇನ್ನು 15 ವರ್ಷದಲ್ಲಿ ಇನ್ನೂ ಎಷ್ಟು ವಾಹನಗಳು